ಅದರ ಪ್ರಕಾರವಾಗಿ ಆಗಿಲ್ಲ. ದಯವಿಟ್ಟು ಕೂಡಲೇ ತೀವ್ರ ಕ್ರಮ ತೆಗೆದುಕೊಂಡು ಈ ಯೋಜನೆಗಳನ್ನು ಗುಬ್ಬಿ ತಾಲ್ಲೂಕಿಗೆ ಅಳವಡಿಸುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ವಿ. ಮುನಿಯಪ್ಪ :– ಮಾನ್ಯ ಅಧ್ಯಕ್ಷರೆ, ಈ ಸಾರಿ ಸ್ಪೇಷಲ್ ಕಾಂಪೊನೆಂಟ್ ಪ್ರೋಗ್ರಾಂ ಮುಖಾಂತರ ಹೊಸದಾಗಿ ನ್ಯೂಪ್ಲಾಂಟೇಷನ್ ಮಾಡತಕ್ಕಂಥ ವ್ಯವಸ್ಥೆಯನ್ನು ಕೈಗೊಂಡು 15 ಜನರನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ಧನವನ್ನಾಗಿ 15 ಸಾವಿರ ರೂಪಾಯಿಗಳನ್ನು ಕೊಡಲು ವ್ಯವಸ್ಥೆಯನ್ನು ಮಾಡಲಾಗಿದೆ. ಜೊತೆಗೆ ಸಿಲ್ಕ್ ರೇರಿಂಗ್ ಹೌಸ್ ಮಾಡುವುದಕ್ಕೆ ಒಬ್ಬರನ್ನು ಆಯ್ಕೆ ಮಾಡಿದ್ದೇವೆ. ಜೊತೆಗೆ ಪ್ಯಾಕೇಜ್ ಪ್ರೋಗ್ರಾಮ್ ಎಂದು ಹೇಳಿ ಅವರಿಗೆ ಅದಕ್ಕೆ ಬೇಕಾದಂಥ ಸಾಮಾನು ಸಲಕರಣೆಗಳನ್ನು ಕೊಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡು 12 ಜನರನ್ನು ಗುರುತಿಸಿದ್ದೇವೆ. ವಿಶೇಷ ಘಟಕ ಯೋಜನೆಯ ಮುಖಾಂತರ ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂಥ ಒಂದು ಕಾರ್ಯಕ್ರಮವನ್ನು ಮುಂದೆ ಪರಿಶೀಲನೆ ಮಾಡಿ ತೆಗೆದುಕೊಳ್ಳುತ್ತೇವೆ.

ವಿಷಯ :– ಎರಡನೆಯ ಮಹಾಯುದ್ಧದಲ್ಲಿ ಸೇವೆ ಸಲ್ಲಿಸಿದಂತಹವರಿಗೆ ನಿವೃತ್ತಿ ವೇತನ.

ಚುಕೆ ಗುರುತಿನ ಪ್ರಶ್ನೆ ಸಂಖ್ಯೆ 211 (981)

ಶ್ರೀ ಕೆ. ಸಿ. ಮೋಡಗೆಕರ್ ದೇಸಾಯಿ (ಬಾಗೇಪಾಡಿ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಪಂಚದ ಎರಡನೆಯ ಮಹಾ ಯುದ್ಧದಲ್ಲಿ (1943 ರಿಂದ 1946) ಭಾಗವಹಿಸಿದ ಮಾಜಿ ಸೈನಿಕರಿಗೆ ಸರ್ಕಾರದಿಂದ ಪಿಂಚಣಿ ಕೊಡುವ ಯೋಜನೆ ಇದೆಯೇ ?

ಆ) ಹಾಗೇನಾದರೂ ಈ ಯೋಜನೆ ಇದ್ದಲ್ಲಿ ಇದುವರೆವಿಗೂ ಸರ್ಕಾರಕ್ಕೆ ನಿವೃತ್ತ ಸೈನಿಕರಿಂದ ಬಂದಿರೆತಕ್ಕಂತಹ ಒಟ್ಟು ಅರ್ಜಿಗಳೆಷ್ಟು ?

ಇ) ಮತ್ತು ಪ್ರಪಂಚದ ಎರಡನೇ ಮಹಾ ಯುದ್ಧದಲ್ಲಿ ಭಾಗವಹಿಸಿದ ಮಾಜಿ ಸೈನಿಕರಿಗೆ ಪಿಂಚಣಿ ಕೊಡುವ ಯೋಜನೆಯನ್ನು ಸರ್ಕಾರವು ಕಾರ್ಯಗತ ಗೊಳಿಸುತ್ತಿದೆ ಎಂದು ಬೇರೆ ಬೇರೆ ಇಲಾಖೆಗಳು ಸಳೀಯ ದಿನ ಪತ್ರಿಕೆಗಳಲ್ಲಿ ಜಾಹಿರಾತು ಕೊಟ್ಟಿರುವುದೇ ?

ಈ) ಹಾಗಿದ್ದಲ್ಲಿ, ಇದುವರೆವಿಗೂ ಒಟ್ಟು ಎಷ್ಟು ಮಂದಿಗೆ ಈ ಪಿಂಚಣಿ ಸೌಲಭ್ಯವನ್ನು ಮಂಜೂರಾತಿ ನೀಡಿದೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :–

ಅ) ಇಲ್ಲ.

ಆ) ಉದ್ಭವಿಸುವದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

Sri. K. C. Modgekar Desai:– Speaker Sir, I am surprised to get a reply for the question "Whether there is a scheme of the Karnataka Government to sanction pension to all those who have served in the Second World War (during 1943 to 1946) ?" Sir, it is a known fact and history that Ex-Servicemen of Azad Hind Sena led by Netaji Subhash Chandra Bose have helped the nation to get its independence with the support of Japan during 1943–46. These servicemen should get the pension like freedom fighters who have sacrificed their lives and served during their lives. We are eating the fruits of independent India. Many states like Maharashtra and other states have sanctioned this pension to those who served during 1943-46. Why the Karnataka Government is not considering giving pension to them ?

Sri. S. Bangarappa :– There is no scheme as such evolved by any state government including Karnataka. This is a scheme evolved by the Government of India. Actually the Government of India wrote to all the State Governments. In fact they published enews item which has appeared in news Papers like The Hindu, The Indian Express

and the Deccan Herald, the Times of India on 7-5-1989 calling for information about the persons who actully took part in the second World War and somethings like that. On 1-10-1990 we we have sent to the Government of India all the details of those persons who are residing in Karnataka. I will have to confine myself to our Karnataka state only. The applications so sent to the Government of India are round about 3,000 applications. I could see the point raised by the Hon. Member about extending certain help to these ex-servicemen who are either the members of the army founded by Subhash Chandra. Bose or who participated actually in the second World War.

We have furnished all the details and information to the Government of India. Now the matter is lying with the Government of India. They should evolve or think over a scheme.

ವಿಷಯ :– ಮುಡುಕು ತೊರೆ ನೀರಾವರಿ ಯೋಜನೆಯ ಎರಡನೆಯ ಹಂತ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 212 (877)

ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮುಡುಕು ತೊರೆ ಎರಡನೇ ಹಂತ ಪ್ರಾರಂಭವಾದದ್ದು ಯಾವಾಗ ?

ಆ) ಅದು ಈಗ ಯಾವ ಹಂತದಲ್ಲಿದೆ ? ಇದರಿಂದ ಎಷ್ಟು ಜಮೀನಿಗೆ ನೀರಾವರಿ ಆಗುವುದು ?

ಇ) ಈ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆಯೇ ?

ಈ) ಹಾಲಿ ಕೆಲಸವು ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಪುನಃ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :–

ಅ) ಮುಡುಕುತೊರೆ ಎರಡನೇ ಹಂತದ ಏತ ನೀರಾವರಿ ಯೋಜನೆಯ ಕಾಮಗಾರಿ ದಿನಾಂಕ 18-3-89 ರಂದು ಪ್ರಾರಂಭವಾಯಿತು.

ಆ) ಈಗ ಯೋಜನೆಯ ಇನ್‌ಟೆಕ್ ಕಾಲುವೆ, ಹೆಡ್‌ವಾಲ್, ಜಾಕ್‌ವೆಲ್ ಮತ್ತು ರೈಸಿಂಗ್ ಮೈನ್ ಕೆಲಸವು ಪ್ರಗತಿಯಲ್ಲಿದೆ. ಈ ಯೋಜನೆಯಿಂದ 2000 ಎಕರೆ (810 ಹೆಕ್ಟೇರ್) ಪ್ರದೇಶವು ನೀರಾವರಿ ಸೌಲಭ್ಯಕ್ಕೆ ಒಳಪಡುತ್ತದೆ. ಮತ್ತು ಯೋಜನೆಯನ್ನು ಎರಡು ಬೆಳೆಗಳಿಗೆ ಯೋಜಿಸಲಾಗಿದೆ.

ಇ) ಯೋಜನೆಯ ಬಾಕಿ ಉಳಿದಿರುವ ಕಾಮಗಾರಿಗಳು ಅಂದರೆ :– ಕಾಲುವೆ, ಪಂಪಸೆಟ್ ಮತ್ತು ಇತರ ಆಡ್ಡ ಮೋರಿ ಕೆಲಸಗಳಿಗೆ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರನ್ನು ನೇಮಿಸುವ ಹಂತದಲ್ಲಿದೆ

ಈ) ಸದರಿ ಯೋಜನೆಯ ಕೆಲಸವು ನಿಂತಿರುವುದಿಲ್ಲ, ಇನ್‌ಟೆಕ್ ಕಾಲುವೆ, ಹೆಡ್‌ವಾಲ್ ಜಾಕ್‌ವೆಲ್ ಮತ್ತು ರೈಸಿಂಗ್ ಮೈನ್ ಕೆಲಸಗಳು ಪ್ರಗತಿಯಲ್ಲಿರುತ್ತವೆ. ಯೋಜನೆಯ ಉಳಿದ ಭಾಗದ ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದ್ದು, ಗುತ್ತಿಗೆದಾರರನ್ನು ನೇಮಿಸಿದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀಮತಿ ಮಲ್ಲಾಜಮ್ಮ :– ಮುಡುಕು ತೊರೆ ಎರಡನೇ ಹಂತದಲ್ಲಿರುವ ಏತ ನೀರಾವರಿ ಯೋಜನೆಯಿಂದ 10-15 ಗ್ರಾಮಗಳಿಗೆ ನೀರಾವರಿ ಸೌಲಭ ದೊರೆಯುವುದಿದ್ದರೂ ಇವರು ಕೊಟ್ಟಿರುವ ಮಾಹಿತಿ ಪ್ರಕಾರ ಕೆಲವು ಕೆಲಸಗಳು ಪ್ರಾರಂಭವಾಗಿದೆಯೇ ವಿನಹ ಚಾನಲ್ ಕೆಲಸ ನಡೆಯುತ್ತಿಲ್ಲ. ಆ ಕೆಲಸ ಸ್ಥಗಿತವಾಗಿದೆ. ನಾನು 2-3 ಬಾರಿ ಸದರಿ ಯೋಜನಾ ಪ್ರದೇಶಕ್ಕೆ ಹೋಗಿದ್ದಾಗ ಅಲ್ಲಿರತಕ್ಕ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲಿ ಅಥವಾ ಸಂಬಂಧಪಟ್ಟ ಕೆಲಸವನ್ನು ನಿರ್ವಹಿಸುವವರು ಯಾರೇ ಆಗಲಿ ಅಲ್ಲಿರಲಿಲ್ಲ. ಆ ಭಾಗದಲ್ಲಿ ಹಾಲಿ ಯಾವ ಕೆಲಸಗಳು ನಡೆಯುತ್ತಿಲ್ಲ. ಆದ್ದರಿಂದ ತಕ್ಷಣ ಆ ಕೆಲಸವನ್ನು ಪ್ರಾರಂಭಿಸಬೇಕು. ಮತ್ತು ಕೂಡಲೇ ಆಗತ್ಯವಿರುವ ಹಣವನ್ನು ಮಂಜೂರ್ಮಾಡಬೇಕೆಂದು ಒತ್ತಾಯಿಸುತ್ತೇನೆ.